ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ **147/2018**

ದಿನಾಂಕ **18.02.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಪಿ.ಎಸ್.ಎಂ ವಕೀಲರಿಂದಃ

4. 1 ನೇ ಪ್ರತಿವಾದಿ ಸಿ.ಕೆ ಪುರ ಗ್ರಾಮ ಪಂಚಾಯ್ತಿಗೆ ಖಾತೆ ಮಾಡಿ ಎಂದು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅರ್ಜಿ ಕೊಟ್ಟಾಗ ನನ್ನ ಗಂಡನ ತಂದೆ ಈ ದಾವಾದ ವಾದಿ ತಕರಾರು ಇಲ್ಲ ಎಂದು ಖಾತೆ ಮಾಡಲು ಸಮ್ಮತಿ ಸೂಚಿಸಿದ್ದಾರೆ ಎಂದರೆ ಸರಿಯಲ್ಲ. ನಿಪಿ-28 ರಲ್ಲಿ ಸದರಿ ಅಂಶ ನಮೂದಾಗಿದೆ ಎಂದರೆ ಮೋಸದಿಂದ ಆ ರೀತಿ ಬರೆಸಿಕೊಂಡಿದ್ದಾರೆ. ನಾನು ಎಸ್.ಎಸ್.ಎಲ್.ಸಿ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನಿಪಿ-22 ರಲ್ಲಿ ನನ್ನ ಗಂಡನ ತಂದೆ ಹೆಸರನ್ನು ವೃತ್ತಾಕಾರವಾಗಿ ಮಾಡಿ 1 ನೇ ಪ್ರತಿವಾದಿ ಹೆಸರನ್ನು ಬರೆಯಲಾಗಿದೆ ಎಂದರೆ ಮೋಸದಿಂದ ಮಾಡಿಕೊಂಡಿದ್ದಾರೆ. 1 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆದ ನಂತರವೇ 2 ನೇ ಪ್ರತಿವಾದಿ ಹೆಸರಿಗೆ ಖಾತೆ ಪಹಣಿ ಆಗಿದೆ ಎಂದರೆ ಮೋಸದಿಂದ ಆಗಿದೆ.

5. ನನ್ನ ಮಾವನ ಹೆಸರಿನಲ್ಲಿರುವ ಖಾತೆ ಪಹಣಿಯನ್ನು ನಾನು ನ್ಯಾಯಾಲಯದ ಮುಂದೆ ಹಾಜರುಮಾಡಿದ್ದೇನೆ. ದಾವಾ ಸ್ವತ್ತಿನಲ್ಲಿ ಹಂಚಿನ ಮನೆ ಇರುವ ಬಗ್ಗೆ ಪೋಟೋ ವನ್ನು ಹಾಜರುಪಡಿಸಿದ್ದೇನೆ. ಮನೆ ಕೆಡವಿ ಪ್ರತಿವಾದಿಗಳು ಮನೆ ಕಟ್ಟುವಾಗ ಪೋಲಿಸ್ ಠಾಣೆಗೆ ದೂರು ನೀಡಿದ್ದೀರಾ ಎಂದರೆ ನ್ಯಾಯಾಲಯದಿಂದ ಸ್ಟೇ ತಂದಿದ್ದೇವೆ. ದಿ.23.10.1982 ನನ್ನ ಮಾವನ ಹೆಸರಿಗೆ ಗ್ರಾಂಟ್ ಆದ ಸೈಟ್ ನಂ.9 ಈವತ್ತಿನವರೆಗೂ ಖಾತೆ ಆಗಿಲ್ಲ ಎಂದರೆ, ಖಾತೆ ಆಗಿದೆ ಖಾತೆ ನಂ.312 ಆಗಿರುತ್ತದೆ. ನನ್ನ ಮಾವನಿಗೆ ಮಂಜೂರಾದ ಸೈಟ್ ನ ಚೆಕ್ಕುಬಂದಿಯೇ ಬೇರೆ ದಾವಾದಲ್ಲಿರುವ ಚೆಕ್ಕುಬಂದಿಯೇ ಬೇರೆ

ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಮನೆ ಕಟ್ಟಿಕೊಂಡು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇದ್ದಾರೆ ಅವರಿಗೆ ತೊಂದರೆ ಕೊಡಲು ವಿನಾ ಕಾರಣ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಾವ 1 ನೇ ಪ್ರತಿವಾದಿ ಹೆಸರಿಗೆ ಖಾತೆ ಆಗುವಾಗ ಮತ್ತು 2 ನೇ ಪ್ರತಿವಾದಿ ಹೆಸರಿಗೆ ದಾನಪತ್ರ ಆದಾಗ ಸಮ್ಮತಿ ಕೊಟ್ಟಿದ್ದರು ನಾನೇ ವಿನಾ ಕಾರಣ ಅವರ ಮೂಲಕ ದಾವೆ ಸಲ್ಲಿಸಿ ಅವರು ನ್ಯಾಯಾಲಯಕ್ಕೆ ಬಂದರೆ ನಿಜಾಂಶ ತಿಳಿಯುತ್ತದೆ ಎಂದು ನಾನೇ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹೆಸರಿಗೆ ಪಂಚಾಯ್ತಿಯಲ್ಲಿ ಖಾತೆ ಆದಾಗಲೂ ನನ್ನ ಮಾವ ತೊಂದರೆ ಮಾಡಿಲ್ಲ, ಆದರೆ ನಾನೆ ವಿನಾ ಕಾರಣ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಸ್ವಾಧೀನಕ್ಕೆ ನಾನು ವಿನಾ ಕಾರಣ ತೊಂದರೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ ಆದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>
(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ